ಓಎಸ್. 14/2020 ಡಿಡಬ್ಲ್ಯೂ:1

ದಿನಾಂಕಃ **09.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ವಿ ಆರ್ ವಕೀಲರಿಂದಃ

ನನಗೆ ಊರಿನಲ್ಲಿ ಶೇಖರ್ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ. ನನ್ನ ತಂದೆ ಸುಬ್ಬಪ್ಪರವರಿಗೆ ಸುಬ್ಬಣ್ಣ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಾತನ ಹೆಸರು ಪುಟ್ಟಬಸಪ್ಪ ಇರುತ್ತದೆ. ಸದರಿಯವರಿಗೆ ಪುಟ್ಟಪ್ಪ ಎಂದು ಸಹಾ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ತಾಯಿಯ ಹೆಸರು ಮಲ್ಲಮ್ಮ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನ ಹೆಸರು ಮಹದೇವಪ್ಪ ಎಂದರೆ ಸರಿ. ಸದರಿಯವರು ಮೂಡಲಪುರ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನ್ನ ತಾತ ಪುಟ್ಟಬಸಪ್ಪನವರ ಅಣ್ಣತಮ್ಮಂದಿರ ಹೆಸರುಗಳು ನನಗೆ ಗೊತ್ತಿಲ್ಲ.

ಈ ದಾವೆಯನ್ನು ವಾದಿಗಳು ನನ್ನ ವಿರುದ್ಧ ಯಾವ ಪರಿಹಾರ ಕೇಳಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೂಡಲಪುರದಲ್ಲಿರುವ ಹೆಂಚಿನ ಮನೆಯನ್ನು ಪರ್ವತಪ್ಪನವರಿಂದ ಖರೀದಿ ಮಾಡಿರುತ್ತಾರೆ. ಸದರಿ ಪರ್ವತಪ್ಪ ನನ್ನ ತಾತನಿಗೆ ಸಂಬಂಧದಲ್ಲಿ ಏನಾಗಬೇಕು ಎಂದು ನನಗೆ ಮಾಹಿತಿ ಇಲ್ಲ. ಸದರಿ ಮನೆ ಪರ್ವತಪ್ಪನವರಿಗೆ ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ.

ಮೂಡಲಪುರ ಗ್ರಾಮದಲ್ಲಿ ದಾವಾ ಸ್ವತ್ತು ಐಟಂ ನಂ.1 ರಲ್ಲಿ ಕಾಣಿಸಿದಂತಹ ಮನೆಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಐಟಂ ನಂ.3 ಮತ್ತು 4 ರಲ್ಲಿ ಕಾಣಿಸಿರುವ ಮನೆ ಮತ್ತು ಖಾಲಿ ನಿವೇಶನಗಳನ್ನು ನನ್ನ ತಂದೆ ತನ್ನ ಹೆಸರಿಗೆ ಖಾತೆ ಬದಲಾಯಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2, 3 ಮತ್ತು 5 ರಲ್ಲಿ ಕಾಣಿಸಿರುವ ಪುಟ್ಟಪ್ಪನ ಮಗ ಸುಬ್ಬಪ್ಪ ಎನ್ನುವ ವ್ಯಕ್ತಿ ನನ್ನ ತಂದೆಯಾಗಿರುವುದಿಲ್ಲ. ಸದರಿ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳಾಗಿರುವುದಿಲ್ಲ.

ನನ್ನ ತಾತ ಪುಟ್ಟಬಸಪ್ಪನಿಗೆ ಚನ್ನಬಸಪ್ಪ ಎನ್ನುವ ತಮ್ಮ ಇರುವ ಕುರಿತು ನನಗೆ ಮಾಹಿತಿ ಇಲ್ಲ. 2 ಮತ್ತು 3 ನೇ ವಾದಿ ಮಂಗಳಮ್ಮ ಮತ್ತು ಬಸವಣ್ಣ ನನಗೆ ಪರಿಚಯವಿಲ್ಲ. ನಾವು ಆಸ್ತಿ ಖರೀದಿ ಮಾಡಿದ ಪರ್ವತಪ್ಪ ನನ್ನ ತಾತನ ತಮ್ಮ ಚನ್ನಬಸಪ್ಪನ ಮಗ ಎಂದರೆ ನನಗೆ ಗೊತ್ತಿಲ್ಲ. ಪರ್ವತಪ್ಪನವರಿಗೆ ಮುದ್ದುಬಸಪ್ಪ ಮತ್ತು ಮಹದೇವಪ್ಪ ಎಂಬ ಸಹೋದರರಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಾತ ಪುಟ್ಟಬಸಪ್ಪ ಮತ್ತು ಚನ್ನಬಸಪ್ಪರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಅವರ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ಹೊಂದಿದ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯರು ಚನ್ನಬಸಪ್ಪರವರ ವಾರಸುದಾರರಿದ್ದು ದಾವಾ ಸ್ವತ್ತಿನಲ್ಲಿ ಹಕ್ಕು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಸುಮಾರು 7 ವರ್ಷಗಳ ಹಿಂದೆ ನನ್ನ ತಂದೆ ಮೃತರಾಗಿರುತ್ತಾರೆ. ಈಗ ನಾವು ವಾಸವಿರುವ ಮನೆಯನ್ನು ನನ್ನ ತಂದೆ ಕ್ರಯಕ್ಕೆ ಪಡೆದಿದ್ದು, ಸದರಿ ಆಸ್ತಿಯನ್ನು ಹೊರತು ಪಡಿಸಿ ನನ್ನ ತಂದೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಹೊಂದಿರುವುದಿಲ್ಲ. ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಜಮೀನುಗಳು ಇರುವುದಿಲ್ಲ. ದಾವಾ ಸ್ವತ್ತುಗಳು ನನ್ನ ಮತ್ತು ವಾದಿಗಳ ತಾತಂದಿರ ಪಿತ್ರಾರ್ಜಿತ ಆಸ್ತಿಗಳಾಗಿದ್ದು

ಇಲ್ಲಿಯವರೆಗೂ ಪಾಲು ವಿಭಾಗವಾಗಿರದ ಕಾರಣ ವಾದಿಗಳು ದಾವಾ ಸ್ವತ್ತಿನಲ್ಲಿ ಹಕ್ಕು ಅಧಿಕಾರ ಹೊಂದಿದ್ದು ಪಾಲು ವಿಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ವಿಭಾಗ ಮಾಡಿಆಸ್ತಿಯನ್ನು ಕೊಡಬಾರದು ಎಂಬ ಉದ್ದೇಶದಿಂದ ವಾದಿಗಳು ಗೊತ್ತಿಲ್ಲ, ದಾವಾ ಸ್ವತುಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಮತ್ತು ದಾಖಲೆಗಳಲ್ಲಿರುವ ಹೆಸರು ನನ್ನ ತಂದೆಯದಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.